AKSHARASURYA
Peer-Reviewed, Multi Lingual E-Journal
Volume – 02, Issue – 01, January 2023.

# ಹೊನ್ನಾಳಿ ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳ ಭಾಷಾವೈಜ್ಞಾನಿಕ ಪರಿಶೀಲನೆಗಳು

**ಡಾ.ಉದಯಕುಮಾರ ಎಸ್.**
ಕನ್ನಡ ಉಪನ್ಯಾಸಕರು
9449967545
udaykumar.dvg@gmail.com

**ಶಾಸನೋಕ್ತ ಸ್ಥಳನಾಮಗಳು :**

ಕೇವಲ ಶಾಸನಗಳ ದಾಖಲಿಕರಣ ಮಾಡಿರಾಜರ ಆಡಳಿತ,ಯುದ್ಧಗಳು, ಹಿನ್ನೆಲೆಗಳು, ಭೂ ವಿವರಗಳು, ವಂಶಾವಳಿ, ಗಡಿ ಪ್ರದೇಶಗಳು, ಶಾಸನದರಚನಕಾರರು, ದೊರೆತ ಸ್ಥಳ, ಶಾಸನದ ವಸ್ತು ವಿಷಯ ಮುಂತಾದ ವಿಷಯಗಳನ್ನು ಚರ್ಚಿಸುವುದಲ್ಲ. ಅದರ ಹೊರತಾಗಿಯೂಒಂದುಗಹನವಾದ ವಿಚಾರವೂ ಶಾಸನಗಳಲ್ಲಿ ಅಡಗಿರುತ್ತೆ ಅದೇಆವತ್ತಿನ ಶ್ರೀಮಂತಿಕೆಯ ಸಂಸ್ಕೃತಿಯಾಗಿರುತ್ತದೆ. ಇಡೀ ಭರತಖಂಡದ ಪ್ರಾಚೀನ ಸಂಸ್ಕೃತಿಅಡಗಿರುವುದೇ ನಮ್ಮ ಶಾಸನಗಳಲ್ಲಿ ಎಂದರೆತಪ್ಪಾಗಲಾರದು. "ಕನ್ನಡ ನಾಡಿನಜೀವನವುಎಲ್ಲಿಯೂ, ಯಾವ ಕೃತಿಗಳಲ್ಲಿ ಮಡುಗಟ್ಟಿ ನಿಂತಿಲ್ಲ.ಕಾವ್ಯಗಳಲ್ಲಿ ಅಲ್ಲಲ್ಲಿಗೋಪ್ಯದಜಲದಂತೆಕಂಡುಬಂದರೂ, ಹೆಚ್ಚು ಪ್ರಮಾಣದಲ್ಲಿ, ಹೆಚ್ಚು ವಿಸ್ತಾರವಾಗಿ, ಹೆಚ್ಚು ಶುದ್ಧರೂಪದಲ್ಲಿ ಕಾಣಿಸಿಕೊಳ್ಳುವುದು ಶಾಸನಗಳಲ್ಲಿ."[1]

"ಶಾಸನಗಳು ಐತಿಹಾಸಿಕ ದಾಖಲೆಗಳಷ್ಟೆ ಅಲ್ಲ, ಸ್ಥಳನಾಮ ಕೋಶಗಳು ಹೌದು"[2] ಇದನ್ನು ಗಮನಿಸಿದಾಗ ಶಾಸನಗಳ ಪ್ರಸ್ತುತತೆ ಹಾಗೂ ವಿಶೇಷತೆಎಷ್ಟಿದೆಎಂದು ತಿಳಿದು ಬರುತ್ತದೆ. ಪ್ರತಿ ಗ್ರಾಮಗಳಲ್ಲೂ ದೊರಕಿರುವ ಶಾಸನಗಳಲ್ಲಿ ಸ್ಥಳನಾಮಗಳ ಹೆಸರುಉಲ್ಲೇಖಗೊಂಡಿರುತ್ತದೆ.

ಶಾಸನಗಳನ್ನು ಅಧ್ಯಯನ ಮಾಡುವುದರಿಂದ ಅಂದಿನ ಕಾಲದಚರಿತ್ರೆಯಜೊತೆಗೆ ಆ ಕಾಲದ ಸಂಸ್ಕೃತಿ, ಭಾಷೆ, ಜನಪದ, ಉಚ್ಚಾರಣೆ, ಭಾಷಾ ಸ್ವರೂಪ ಮತ್ತು ಮೌಖಿಕತೆ, ಲಿಖಿತ ಸಾಹಿತ್ಯಗಳ ಬಗ್ಗೆ ಹೆಚ್ಚು ನಿಖರವಾದ ಮತ್ತು ಸತ್ಯವಾದ ಮಾಹಿತಿಗಳನ್ನು ನೀಡುವ ಆಕರಗಳಗಿರುತ್ತವೆ. "ಸೃಷ್ಟಿಯ ಪ್ರತಿಯೊಂದು ಪದಾರ್ಥಕ್ಕೂಒಂದು ಹಿನ್ನೆಲೆಇತಿಹಾಸವಿರುತ್ತದೆ, ಪ್ರತಿಯೊಬ್ಬ ವ್ಯಕ್ತಿಗೂ, ಪ್ರತಿಯೊಂದುಊರಿಗುಚರಿತ್ರೆಇರುತ್ತದೆ. ವ್ಯಕ್ತಿಯ ಹೆಸರು, ಊರಿನ ಹೆಸರುಗಳು ಬರಿಯ ಹೆಸರುಗಳಲ್ಲ ಆ ಹೆಸರುಗಳ ಉಸಿರಲ್ಲಿ, ಬಸಿರಲ್ಲಿ ಆತ್ಮಚರಿತ್ರೆ ಇರುತ್ತದೆ."[3]ಹೊನ್ನಾಳಿ ತಾಲ್ಲೂಕಿನ ಸ್ಥಳನಾಮಗಳ ಬಗ್ಗೆ ನಿಖರವಾಗಿ ತಿಳಿಯಲು ತಾಲ್ಲೂಕಿನಾದ್ಯಂತ ಸಂಚರಿಸಿ ಶಾಸನಗಳನ್ನು ಗುರುತಿಸಿ ಅವುಗಳ ದಾಖಲಿಕರಣ ಮಾಡಿರುವ ಬಿ.ಎಲ್‌ರೈಸ್ ಸಂಪಾದಿಸಿರುವ ಎಪಿಗ್ರಪಿಯಕರ್ನಾಟಿಕದ ಸಂಪುಟ 7ರಲ್ಲಿನ ಹೊನ್ನಾಳಿಯ ಶಾಸನಗಳ ಸಾರಾಂಶದಲ್ಲಿರುವ ಸಾಂಸ್ಕೃತಿಕಅನನ್ಯತೆಯನ್ನುಗುರುತಿಸಲಾಗಿದೆ. ಪ್ರಸ್ತುತದಾಖಲುಗೊಂಡಿರುವ ಸ್ಥಳನಾಮಗಳ ವ್ಯಾಕರಣದ ಹಿನ್ನೆಲೆಯಲ್ಲಿತುಲನಾತ್ಮಕವಾಗಿ ತಿಳಿಯಲಾಗಿದೆ.

ಊರುಗಳ ಇತಿಹಾಸ ತಿಳಿಯಲು ಇದೇ ಶಾಸನಗಳು ಆಕರಗಳಾಗುತ್ತವೆ. ತಲೆಮಾರುಗಳು ಹಾಗೂ ಕಾಲ ಬದಲಾದಂತೆ ಗ್ರಾಮನಾಮಗಳ ಉಚ್ಚಾರಣೆ, ಮೌಖಿಕತೆ, ಲಿಖಿತತೆ, ಭಾಷೆ ಸ್ವರೂಪ ಹಾಗೂ ಅದರ ಬದಲಾವಣೆಗಳನ್ನು ಈ ಶಾಸನಗಳು ದೊರಕಿಸಿಕೊಡುತ್ತವೆ. ಶಾಸನಗಳಲ್ಲಿ ನಿಖರವಾದ, ವಿಶ್ವಾಸನೀಯ, ವಸ್ತುನಿಷ್ಠ, ಮಾಹಿತಿಗಳು ದೊರಕುವುದರಿಂದ ಅವುಗಳ ಅಧ್ಯಯನ ಬಹುಮುಖ್ಯ ಎನಿಸುತ್ತದೆ. ಪ್ರಾಚೀನಕಾಲದಲ್ಲಿ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಸ್ಥಳನಾಮಗಳನ್ನು ಪತ್ತೆಹಚ್ಚಿ ಅವುಗಳ ನಿಜರೂಪ, ಬದಲಾವಣೆಗಳನ್ನು ತಿಳಿಯಲು ಸಹಕಾರಿಯಾಗುವುದರಿಂದ ಸಂಸ್ಕೃತಿಯ ನಿಜರೂಪ ತಿಳಿಯುತ್ತದೆ.

ತಾಲ್ಲೂಕಿನಎಲ್ಲಾ ಸ್ಥಳನಾಮಗಳು ಶಾಸನಗಳಲ್ಲಿ ಉಲ್ಲೇಖಗೊಂಡಿರುವುದಿಲ್ಲ. ಒಟ್ಟಾರೆ ಪ್ರಾಚೀನ ಸ್ಥಳನಾಮಗಳ ನಿಜರೂಪ, ಸ್ವರೂಪ, ಸಂಸ್ಕೃತಿಯನ್ನು ಪ್ರಮಾಣಿಕವಾಗಿ ತಿಳಿಸುತ್ತವೆ. ಸ್ಥಳನಾಮಗಳು ತಲೆಮಾರಿನಿಂದತಲೆಮಾರಿಗೆಯಾವರೀತಿಯಾಗಿತಮ್ಮ ಮೂಲ ರೂಪಗಳನ್ನು ಬದಲಾಯಿಸುತ್ತಾ ಬಂದಿರುವಜಾಯಮಾನವನ್ನುಗುರುತಿಸಲು ಸಾಧ್ಯವಾಗುತ್ತದೆ. ಇಲ್ಲಿಶಾಸನಗಳನ್ನು

ಬಳಸಿಕೊಂಡಿದ್ದು, ಅನುಸರಿಸಬೇಕಾದ ಕ್ರಮಗಳೆಂದರೆ, ಶಾಸನಗಳ ಪೂರ್ಣ ಪಾಠವನ್ನಾಗಲೀ, ವಸ್ತುವನ್ನಾಗಲೀ, ಪ್ರಕಾರವನ್ನಾಲೀಕೊಡಲಾಗಿಲ್ಲ. ಶಾಸನ ಸಂಖ್ಯೆ, ಕಾಲ, ದೊರೆತ ಸ್ಥಳ, ಅರಸರು, ಶಾಸನದ ವಿಧ ಮುಖ್ಯವಾದ್ದರಿಂದಅವುಗಳನ್ನು ದಾಖಲಿಸಲಾಗಿದೆ. ಶಾಸನೋಕ್ತ ಸ್ಥಳನಾಮಗಳ ಮೇಲೆ ಸೂಚಿಸಲಾಗುವ ಸಂಖ್ಯೆಗಳು ಆ ಸ್ಥಳನಾಮವು ಇತರೆಉಲ್ಲೇಖಿತ,ಶಾಸನದ ಸಂಖ್ಯೆಯನ್ನು ನಿರ್ದೇಶಿಸುತ್ತದೆ. ಇಲ್ಲಿಬಿ.ಎಲ್.ರೈಸ್‌ರವರು ಸಂಪಾದಿಸಿರುವ ಎಪಿಗ್ರಫಿಯಾಕರ್ನಾಟಿಕ ಸಂಪುಟ–7ರ 1901ರ ಆವೃತ್ತಿಯನ್ನುಆಧಾರಗ್ರಂಥವಾಗಿ ಬಳಸಿಕೊಳ್ಳಲಾಗಿದೆ.

**ಭಾಷಾ ವೈಜ್ಞಾನಿಕ ಪರಿಶೀಲನೆಗಳು :**

ಹೊನ್ನಾಳಿ ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳನ್ನು ಈಗಾಗಲೇ ಗುರುತಿಸಲಾಗಿದ್ದು, ಮುಂದುವರೆದು ಅವುಗಳನ್ನು ಭಾಷಾವೈಜ್ಞಾನಿಕ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸುವುದಾಗಿದೆ. ಕಾಲಮಾನಕ್ಕೆಅನುಗುಣವಾಗಿ ಶಾಸನಗಳ ಸಂಖ್ಯೆ ಹಾಗೂ ಕಾಲವನ್ನು ಪುನರಾವರ್ತಿಸಲಾಗಿದೆ. ಶಾಸನಗಳಲ್ಲಿ ಉಲ್ಲೇಖಗೊಂಡಿರುವಇತರೆ ಪ್ರದೇಶದ ಸ್ಥಳನಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿರುವುದಿಲ್ಲ. ಪ್ರಸ್ತುತಉಚ್ಚಾರಣೆಯಕ್ರಮಕ್ಕಾಗಿ ನಿಖರತೆಗೆಕರ್ನಾಟಕಗ್ರಾಮಸೂಚಿಯನ್ನು ಬಳಸಿಕೊಳ್ಳಲಾಗಿದೆ. ಒಂದೇ ಸ್ಥಳನಾಮವು ಹಲವು ಶಾಸನಗಳಲ್ಲಿ ಉಲ್ಲೇಖಗೊಂಡಿದ್ದರೆ ಕೇವಲ ಒಂದು ಪ್ರಾಚೀನ ಸ್ಥಳನಾಮವನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ಒಂದೇ ಸ್ಥಳನಾಮವು ಶಾಬ್ದಿಕ ಭಿನ್ನರೂಪದಲ್ಲಿ ಹಲವು ಶಾಸನಗಳಲ್ಲಿ ಉಲ್ಲೇಖಗೊಂಡಿದ್ದರೆಅದರ ಶಬ್ದವನ್ನುಪರಿಶೀಲನೆಗೆ ಒಳಪಡಿಸಿದೆ. ಶಾಸನಗಳ ಕ್ರಮಸಂಖ್ಯೆಯನ್ನುಅನುಸರಿಲಾಗಿದೆಯೇ ಹೊರತುಕಾಲಾನುಕ್ರಮವನಲ್ಲಎಂಬುದನ್ನುಅರಿತುಕೊಂಡುಅಧ್ಯಯನ ನಡೆಸಲಾಗಿದೆ. ಈ ಪರಿಶೀಲನೆಗೆ ಸಿ.ಎಂ ವಿಶ್ವನಾಥಯ್ಯರಕಡೂರುತಾಲ್ಲೂಕಿನ ಸ್ಥಳನಾಮಗಳ–ಒಂದು ಅಧ್ಯಯನ ಸಂಶೋಧನ ವರದಿಯ ಶಾಸನೋಕ್ತ ಸ್ಥಳನಾಮಗಳು ಎಂಬ ಅಧ್ಯಾಯದ ಮಾದರಿಯನ್ನುಆದರ್ಶವಾಗಿ ಇರಿಸಿಕೊಳ್ಳಲಾಗಿದೆ.

**ಸ್ವರಾರಂಭದ ಸ್ಥಳನಾಮಗಳು :**

| ಶಾಸನ ಸಂಖ್ಯೆ | ಶಾಸನದ ಕಾಲ(ಕ್ರಿ.ಶ) | ಉಲ್ಲೇಖಿತ ಸ್ಥಳನಾಮಗಳು | ವರ್ತಮಾನದ ಉಚ್ಚಾರಣಾರೂಪ | ಶಾಬ್ದಿಕವ್ಯತ್ಯಾಸ |
|---|---|---|---|---|
| 1 | 1055 | ಒನ್ನಾಳಿ20 | ಹೊನ್ನಾಳಿ | ಒ>ಹ + ಒ |
| 6 | 1390 | ಅರಕೆಱೆ<br>ಅಯ್ಯನೂರ | ಅರಕೆರೆ<br>ಐನೂರು | ಱ>ರ<br>ಅ>ಐ, ಯದ್ವಿತ್ವ ಲೋಪ<br>ಒ>ಊ |
| 7 | – | ಐಯ್ಯಣೂರು | ಐನೂರು | ಯದ್ವಿತ್ವ ಲೋಪ, ಣ>ನ |
| 20 | 1222 | ಆಕೆಱೆ | ಅರಕೆರೆ | ಆ>ಅ, ರ ಲೋಪ, ಱ>ರ |
| 68 | 1403 | ಒನಳಿ | ಹೊನ್ನಾಳಿ | ಒ>ಹ+ಒ, ನ ಸಜಾತಿ ದ್ವಿತ್ವ ಆಗಮನ, ಅ>ಆ |
| 107 | 1047 | ಅಯ್ನೂಱು<br>ಪಱಿಕೆಱೆ | ಐನೂರು<br>ಅರಕೆರೆ | ಅ>ಐ, ಯ ಲೋಪ, ಱ>ರ<br>ಪ(ಹ)>ಅ, ಱ>ರ, ಎ ಲೋಪ, ಱ>ರ |

**ಸಬಿಂದು ಸ್ಥಳನಾಮಗಳು :**

| ಶಾಸನ ಸಂಖ್ಯೆ | ಶಾಸನದ ಕಾಲ(ಕ್ರಿ.ಶ) | ಉಲ್ಲೇಖಿತ ಸ್ಥಳನಾಮಗಳು | ವರ್ತಮಾನದ ಉಚ್ಚಾರಣಾರೂಪ | ಶಾಬ್ದಿಕ ವ್ಯತ್ಯಾಸ |
|---|---|---|---|---|
| 6 | 1390 | ಬಿಶಗೌಂಡನಹಳ್ಳಿ | ಬೀರಗೊಂಡನಹಳ್ಳಿ | ಇ>ಈ ; ಶ>ರ, ಔ>ಒ |
| 7 | – | ಕಂಕನಹಳ್ಳಿ<br>ಸೌಳಂಗ | ಕಂಕನಹಳ್ಳಿ<br>ಸವಳಂಗ | ವ್ಯತ್ಯಾಸವಿಲ್ಲ<br>ಅ ಆಗಮನ, ಔ>ವ |
| 9 | 1557 | ಹೊಂನಾಳಿ<br>ಮೊರಸಗೊಂಡನಹಳ್ಳಿ | ಹೊನ್ನಾಳಿ<br>ಮಾರಗೊಂಡನಹಳ್ಳಿ | ಬಿಂದು ಲೋಪ, ದ್ವಿತ್ವಾಗಮನ<br>ಒ>ಅ, ಸ ಲೋಪ |
| 19 | – | ಕೊಂಡೆನಾಯಕನಹಳ್ಳಿ | ಕೊನನಾಯಕನಹಳ್ಳಿ | ಬಿಂದು ಲೋಪ<br>ಡ>ನ, ಎ ಆಗಮನ |
| 34 | 1477 | ಗಾಂಗನಕೋಟೆ | ಗಂಗನಕೋಟೆ | ಆ>ಅ |
| 63 | – | ಸೋಳಂಗ | ಸವಳಂಗ | ಓ>ಅ, ವ ಆಗಮನ |
| 71 | 1397 | ಸುರಹೊಂನೆ | ಸುರಹೊನ್ನೆ | ಬಿಂದು ಲೋಪ, ದ್ವಿತ್ವಾಗಮನ |
| 73 | 1185 | ಸಿಂಗಾಟನೂರ | ಸಿಂಗಟಗೆರೆ | ಆ>ಅ, ಊರು>ಕೆರೆ |
| 76 | 1285 | ವೊಂನಾಳಿ | ಹೊನ್ನಾಳಿ | ವ>ಹ, ಬಿಂದು ಲೋಪ<br>ದ್ವಿತ್ವಾಗಮನ |
| 77 | – | ಕುಂಕೋವೀ | ಕುಂಕುವ | ಓ>ವ ; ಈ>ಅ |
| 81 | 1071 | ಬೆಳ್ಗುಂದ | ಬೆಳಗುತ್ತಿ | ಕುಂದ>ಗುತ್ತಿ |
| 104 | 1685 | ಚೆನಂಮುಂಬಾಪುರ | ಚನ್ನಮುಂಬಾಪುರ | ಎ>ಅ, ದ್ವಿತ್ವಾಗಮನ<br>ಬಿಂದು ಲೋಪ |
| 124 | 17ನೇಶತ | ಸಉಳಂಗ | ಸವಳಂಗ | ಉ>ವ |
| ಮೈ.ಪ್ರಾ. | 1397 | ಹೊಂನೂರನಾಡ | ಹೊನ್ನಾಳಿ | ಮರುನಾಮಕರಣ |
| ಮೈ.ಪ್ರಾ | 1392 | ಸಮಳಂಗ | ಸವಳಂಗ | ಮ>ವ |

**ಸಜಾತಿ ದ್ವಿತ್ವದ ಸ್ಥಳನಾಮಗಳು :**

| ಶಾಸನ ಸಂಖ್ಯೆ | ಶಾಸನದ ಕಾಲ(ಕ್ರಿ.ಶ) | ಉಲ್ಲೇಖಿತ ಸ್ಥಳನಾಮಗಳು | ವರ್ತಮಾನದ ಉಚ್ಚಾರಣಾರೂಪ | ಶಾಬ್ದಿಕ ವ್ಯತ್ಯಾಸ |
|---|---|---|---|---|
| 7 | – | ನೆಲವತ್ತಿ<br><br>ಬೆಳಗವತ್ತಿ | ನ್ಯಾಮತಿ<br><br>ಬೆಳಗುತ್ತಿ | ಎ>ಆ, ಯ ಆಗಮನ, ಲ+ವ ಲೋಪ, ಮ ಆಗಮನ, ದ್ವಿತ್ವ ಲೋಪ<br>ವ>ಉ |
| 11 | 1290 | ಕೊಳಿಗನಗಟ್ಟ | ಕುಳಗಟ್ಟೆ | ಒ>ಉ ; ಇ>ಅ,ಗ+ನ ಲೋಪ<br>ಅ>ಎ |
| 25 | 1208 | ಹತ್ತಿವೂರ | ಹತ್ತೂರು | ಇ>ಊ, ವ+ಊಲೋಪ,ಅ>ಉ |
| 27 | 1171 | ಸೊರಟ್ಟೂರ | ಸೊರಟೂರು | ದ್ವಿತ್ವ ಲೋಪ, ಅ>ಉ |
| 28 | 1196 | ಕತ್ತಿಗಿ | ಕತ್ತಿಗೆ | ಇ>ಎ |
| 34 | 1477 | ನೆಮತ್ತಿ<br><br>ಧೊಡಯತ್ತಿನಹಳ್ಳಿ<br><br>ಸಮಗೊಂಡನಹಳ್ಳಿ | ನ್ಯಾಮತಿ<br><br>ದೊಡ್ಡೆತ್ತಿನಹಳ್ಳಿ<br><br>ಸಾವಗೊಂಡನಹಳ್ಳಿ | ಎ+ಏ>ಅ, ಯ ಆಗಮನ<br>ದ್ವಿತ್ವ ಲೋಪ<br>ಅಲ್ಪ>ಮಹಾ, ಅ>ಎ,ದ್ವಿತ್ವಾಗಮನ<br>ಅ>ಆ, ಯ ಲೋಪ<br>ಅ>ಆ ; ಮ>ವ |
| 35 | 1187 | ನೇಲಿವರ್ತ್ತಿ | ನ್ಯಾಮತಿ | ಏ>ಆ, ಯ ಆಗಮನ,ಲ+ವ ಲೋಪ, ಮ ಆಗಮನ, ದ್ವಿತ್ವ ಲೋಪ, ಋ ಲೋಪ |
| 64 | 973 | ನೆಲ್ಮಬ್ಬೆ | ನ್ಯಾಮತಿ | ಎ>ಆ, ಯ ಆಗಮನ,ಲ ಲೋಪ<br>ದ್ವಿತ್ವ ಲೋಪ, ತ ಆಗಮನ |
| 76 | 1285 | ಚಟ್ಟನಹಳ್ಳಿ | ಚಟ್ನಹಳ್ಳಿ | ಸಜಾತಿ ದ್ವಿತ್ವಲೋಪ<br>ವಿಜಾತಿ ದ್ವಿತ್ವಾಗಮನ |

| | | | | |
|---|---|---|---|---|
| 82 | – | ಚಣಿಕಟ್ಟೆ | ಚನ್ನಿಕಟ್ಟೆ | ಣ>ನ, ದ್ವಿತ್ವಾಗಮನ |
| 87 | – | ಕೊಳ್ಳಿಗನಗಟ್ಟಹಳ್ಳಿ<br>ಕೊಳ್ಳಿಗನಗಟ್ಟ<br>ಕೊಳ್ಳಿನಘಟ್ಟ<br><br>ಸಾಶವಿಹಳ್ಳಿ | ಕುಳಗಟ್ಟೆ<br>ಕುಳಗಟ್ಟೆ<br>ಕುಳಗಟ್ಟೆ<br><br>ಸಾಸ್ವೆಹಳ್ಳಿ | ಒ>ಉ<br>ದ್ವಿತ್ವ ಲೋಪ<br>ಇ>ಅ, ನ+ಗ ಲೋಪ,ಅ>ಎ<br>ಹಳ್ಳಿ ಲೋಪ, ಘ>ಗ<br>ಶ>ಸ ; ಅ>ಎ<br>ವಿಜಾತಿ ದ್ವಿತ್ವಾಗಮನ |
| 101 | – | ಚಿಕ್ಕಗೋಳಿಗೆರೆ | ಚಿಕ್ಕಗೋಣಿಗೆರೆ | ಳ>ಣ |
| 106 | – | ಮುಗತೆನಹಳ್ಳಿ | ಮುಕ್ತೇನಹಳ್ಳಿ | ಗ>ಕ,ವಿಜಾತಿ ದ್ವಿತ್ವಾಗಮನ,ಎ>ಏ |
| 115 | – | ಹೊಸವಳ್ಳಿ | ಹೊಸಹಳ್ಳಿ | ವ>ಹ |

**ವಿಜಾತಿ ದ್ವಿತ್ವದ ಸ್ಥಳನಾಮಗಳು :**

| ಶಾಸನ ಸಂಖ್ಯೆ | ಶಾಸನದ ಕಾಲ(ಕ್ರಿ.ಶ) | ಉಲ್ಲೇಖಿತ ಸ್ಥಳನಾಮಗಳು | ವರ್ತಮಾನದ ಉಚ್ಚಾರಣಾರೂಪ | ಶಾಬ್ದಿಕ ವ್ಯತ್ಯಾಸ |
|---|---|---|---|---|
| 6 | 1390 | ಹುಣ್ಸದಗಟ್ಟ | ಹುಣಸಘಟ್ಟ | ದ್ವಿತ್ವ+ದ ಲೋಪ, ಗ>ಘ |
| 119 | 994 | ನೇಱಿಲುಗುಣ್ಡಿ | ನೇರಲಗುಂಡಿ | ಱ>ರ ; ಉ>ಅ, ಬಿಂದು ಆಗಮನ, ಣ ಲೋಪ |

**ಇತರೆ ಸ್ಥಳನಾಮಗಳು :**

| ಶಾಸನ ಸಂಖ್ಯೆ | ಶಾಸನದ ಕಾಲ(ಕ್ರಿ.ಶ) | ಉಲ್ಲೇಖಿತ ಸ್ಥಳನಾಮಗಳು | ವರ್ತಮಾನದ ಉಚ್ಚಾರಣಾರೂಪ | ಶಾಬ್ದಿಕ ವ್ಯತ್ಯಾಸ |
|---|---|---|---|---|
| 5 | 12ನೇ ಶತ | ದಿಡುಗೂರು | ದಿಡಗೂರು | ಉ>ಅ |
| 6 | 1390 | ಮಲೂರ<br>ಹುರುವೆಹಳ್ಳಿ | ಮಲ್ಲೂರು<br>ಹುರುಳಿಹಳ್ಳಿ | ದ್ವಿತ್ವಾಗಮನ<br>ವ>ಳ |

| | | | | |
|---|---|---|---|---|
| | | ಕುಱುವ<br>ಗೋಳಿಗಿರ್ಯ್<br><br><br>ಕಾಣವತಲೆ<br>ಹಱುಗುಲಹಳ್ಳಿ<br><br><br>ಬಇರಗೂ.....<br><br>ರಾಮಾಪುರ | ಕುರುವ<br>ಗೋಣಿಗೆರೆ<br><br><br>ಕೋಣನತಲೆ<br>ಹರಗನಹಳ್ಳಿ<br><br><br>ಬೀರಗೊಂಡನಹಳ್ಳಿ<br>(ಪ್ರಾಕಲ್ಪನೆ)<br>ರಾಂಪುರ | ಱ>ರ<br>ಳ>ಣ, ಎ>ಇ, ದ್ವಿತ್ವ ಲೋಪ<br>ಱ>ರ, ಅ>ಎ<br>ಆ>ಓ, ವ>ನ<br>ಱ>ರ, ಅ>ಉ, ಉ>ಅ<br>ಲ ಲೋಪ, ನ ಆಗಮನ<br>ಇ>ಈ<br><br>ಮ ಲೋಪ, ಬಿಂದು ಆಗಮನ |
| 7 | – | ಮೊಱಗುರವ<br>ಕಡವದಕೆಱೆ<br>ಬಾಸೂರು<br>ಗೊರವಗೆಱೆ<br>ಸೊಗಿಲೆ<br>ಮಣಲಿ<br>ಮಾದನಬಾಗಿ48<br>ಬಿಜಬೆಗಟ | ಕುರುವ<br>ಕಡದಕಟ್ಟೆ<br>ಬಾಸೂರು<br>ಗೊರವರಹಟ್ಟಿ<br>ಸೋಗಿಲು<br>ಮಳಲಿ<br>ಮಾದನಬಾವಿ<br>ಬೀಜೊಗಟ್ಟೆ | ಮೊಱಹು ಲೋಪ, ಗ>ಕ<br>ವ ಲೋಪ, ಕಟ್ಟೆ>ಕೆರೆ<br>ವ್ಯತ್ಯಾಸವಿಲ್ಲ<br>ಕೆರೆ>ಹಟ್ಟಿ<br>ಒ>ಓ, ಎ>ಉ<br>ಣ>ಳ<br>ಗ>ವ<br>ಇ>ಈ, ಬ ಲೋಪ, ಅ>ಒ<br>ದ್ವಿತ್ವಾಗಮನ, ಅ>ಎ |
| 8 | 1228 | ಮಸಣಿ | ಮಳಲಿ | ಸ>ಳ, ಣ>ಲ |
| 13 | 870 | ಮಾದಿಊರ | ಮಾದಾಪುರ | ಇ>ಆ, ಊರ>ಪುರ |
| 14 | – | ಕೋಟೆಪುರ | ಕೋಟೆಹಾಳು | ಪುರ>ಹಾಳು |
| 30 | 11ನೇ ಶತ | ಮಗುಸದಿ | ಮಾಸಡಿ | ಅ>ಆ, ಗ ಲೋಪ, ದ>ಡ |
| 34 | 1477 | ಧಾಮರಹಟೆ<br><br><br>ಗೋವನಕೋವಿ | ದಾಸರಹಟ್ಟಿ<br><br><br>ಗೋವಿನಕೋವಿ | ಮಹಾ>ಅಲ್ಪ, ಮ>ಸ ; ಎ>ಇ<br>ದ್ವಿತ್ವಾಗಮನ<br>ಅ>ಇ |

| | | | | |
|---|---|---|---|---|
| | | ಧಾನಿ..... | ದಾನಿಹಳ್ಳಿ | ಮಹಾ>ಅಲ್ಪ, ಹಳ್ಳಿ ಸವಕಳಿ |
| 76 | 1285 | ಗೋವನಹಳಿ | ಗೊಲ್ಲರಹಳ್ಳಿ | ಓ>ಒ ; ವ>ಲ, ದ್ವಿತ್ವಾಗಮನ ನ>ರ |
| 94 | – | ಹಾಲಿವಾಳ | ಹಾಲಿವಾಣ | ಳ>ಣ |
| 97 | – | ಮಲಊರ | ಮಲ್ಲೂರು | ದ್ವಿತ್ವಾಗಮನ |
| ಮೈ.ಪ್ರಾ. | 1397 | ಯರಗನಾಡ | ಯರಗನಾಳು | ಡ>ಳ |

**ಭಾಷಾವೈಜ್ಞಾನಿಕ ಪರಿಶೀಲನೆಯ ಫಲಿತಗಳು :**

ಹೊನ್ನಾಳಿ ತಾಲ್ಲೂಕಿನ ಸ್ಥಳನಾಮಗಳನ್ನು ಭಾಷಾವೈಜ್ಞಾನಿಕದೃಷ್ಟಿಕೋನದಿಂದ ಪರಶೀಲನೆಮಾಡಿದಾಗಗೋಚರಿಸುವ ಪ್ರಮುಖ ಫಲಿತಗಳು ಈ ಕೆಳಗಿನಂತಿವೆ.

1. ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳು ಸ್ವರದಿಂದಅಂತ್ಯವಾಗಿವೆಯೇ ಹೊರತು ವ್ಯಂಜನಾಂತವಲ್ಲ.

2. ಸಂಧ್ಯಾಕ್ಷರವಾದ 'ಐ' ಅಕ್ಷರವು 'ಅಯ್' ತಾಲವ್ಯ ಮೌಖಿಕವಾಗಿ ಮತ್ತು 'ಔ' ಅಕ್ಷರವು 'ಅವ್' ದಂತೋಷ್ಠ್ಯ ಮೌಖಿಕವಾಗಿ ಬಳಕೆಯಾಗಲ್ಪಟ್ಟಿವೆ. ಐನೂರು–ಅಯ್ಯನೂರು.ಸೌಳಂಗ–ಸವಳಂಗ.

3. ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳಲ್ಲಿ ಕಂಡುಬರುವಕನ್ನಡ ವ್ಯಂಜನಗಳು ಕೆಳಗಿನಂತಿವೆ.

| | ದಂತ ಓಷ್ಠ್ಯ | ದಂತ್ಯ | ಪ್ರತಿ ವೇಷ್ಟಿತ | ತಾಲವ್ಯ | ಕಂಠ್ಯ |
|---|---|---|---|---|---|
| ಸ್ಪರ್ಶ:ಅಘೋಷ | ಪ್ | ತ್ | ಟ್ | ಚ್ | ಕ್ |
| ಘೋಷ | ಬ್ | ದ್ | ಡ್ | ಜ್ | ಗ್ |
| ನಾಸಿಕ | ಮ್ | ನ್ | ಣ್ | ಞ್ | ಙ್ |
| ಮೌಖಿಕ | ವ್ | ಲ್ | ಳ್ | ಯ್ | |
| ಕಂಪಿತ | ಉ್ | | | | |
| ಘರ್ಷ | ಸ್ | ಶ್ | ಷ್ | ಹ್ | |

4. ಅನುನಾಸಿಕ ವರ್ಣಗಳಾದ 'ಞ' ಮತ್ತು 'ಙ' ಗಳು ತಾಲ್ಲೂಕಿನಯಾವ ಶಾಸನೋಕ್ತ ಸ್ಥಳನಾಮಗಳಲ್ಲಿ ಬಳಕೆಯಾಗಿರುವುದಿಲ್ಲ.

5. ಘರ್ಷ ವರ್ಣಗಳಾದ ಪ್ರತಿವೇಷ್ಟಿತ 'ಷ' ಮತ್ತುದಂತ್ಯ 'ಶ' ಗಳು ಯಾವ ಶಾಸನೋಕ್ತ ಸ್ಥಳನಾಮಗಳಲ್ಲೂ

ಕಂಡುಬರುವುದಿಲ್ಲ. ಇದರಿಂದ 8 ನೇ ಶತಮಾನದಿಂದಲೂ ಈಗಿನ ವರೆಗೆಎಲ್ಲಾ ಸ್ಥಳನಾಮಗಳು ಅಚ್ಚಗನ್ನಡದ ಸ್ಥಳನಾಮಗಳಾಗಿವೆ. ಸಾಶವಿಹಳ್ಳಿ ಮತ್ತು ಬಿಶಗೊಂಡನಹಳ್ಳಿ ಇಲ್ಲಿರುವ 'ಶ' ಕಾರವು ಕಣ್ತಪ್ಪಿನ ಬರವಣಿಗೆಗಳು ಎಂಬುದುಊಹಾತ್ಮಕವಾಗಿರದೇ ಸತ್ಯವಾಗಿದೆ.

6. ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳಲ್ಲಿ ಕಂಡುಬರುವ ಧ್ವನಿಗಳನ್ನು ಪ್ರಸ್ತುತಉಚ್ಚಾರಣಾರೂಪಕ್ಕೆ ಹೋಲಿಸಿದಾಗ ಕಾಣುವಧ್ವನಿ ಪಲ್ಲಟಗಳು ಕಡಿಮೆ ಇವೆ.

7. 'ಱ' ಕಾರವು ಸ್ಥಳನಾಮದ ಯಾವುದೇಘಟಕದಲ್ಲಿರಲಿ ಅದುರೇಫೆಯಾಗಿ ಬದಲಾಗಿದೆ. 12ನೇ ಶತಮಾನದ ಪೂರ್ವದ ಸ್ಥಳನಾಮಗಳಲ್ಲಿ 'ಱ' ಇದ್ದು ನಂತರದ ಸ್ಥಳನಾಮಗಳಲ್ಲಿ ರೇಫೆ ಬಳಕೆಗೊಂಡಿರುವುದು ನೋಡಿದರೆ 'ಱ' ಕಾರವುನ್ನು ಬಳಸುವವರ ಸಂಖ್ಯೆತೀರಕಡಿಮೆಯಾಗುತ್ತಿದೆ.

8. ನಿರ್ದಿಷ್ಟದ ಅಂತ್ಯಗಳಲ್ಲಿ ಕಂಡುಬರುವ ಸಂಬಂಧಸೂಚಕ ಪ್ರತ್ಯಯಗಳಾದ ಳ, ಣ, ಗ, ನ, ಬೆ,ಗಳು ಮಾತ್ರ ಬಳಕೆಯಾಗಿವೆ. ಕುಳಗನಗಟ್ಟೆ, ನೆಲ್ಮಬ್ಬೆ, ದಾನರಹಟ್ಟಿ

9. ಸ್ಥಳನಾಮಗಳ ಪೂರ್ವದಲ್ಲಿ ಸಾಪೇಕ್ಷವಾಗಿದ್ದಾಗ ಸೇರಿಕೊಳ್ಳುವ ವಿಶೇಷಣಗಳಂತಹ ಆಕೃತಿಮಾಗಳಾದ ಚಿಕ್ಕ, ಹೊಸ, ಹಿರಿಯ ಇವುಗಳು ಬಳಕೆಯಾಗಿವೆ, ಹೊಸಹಳ್ಳಿ, ಚಿಕ್ಕಗೋಣಿಗೆರೆ, ಹಿರೆಬಾಸೂರು.

10. ಅನುನಾಸಿಕಗಳು ಬದಲಾಗಿಅನುಸ್ವಾರಅಂದರೆ ಸಬಿಂದುಗೊಳ್ಳುವ ಕನ್ನಡ ಭಾಷೆಯ ಲಕ್ಷಣವ ಶಾಸನೋಕ್ತ ಸ್ಥಳನಾಮಗಳಲ್ಲಿ ಕಂಡುಬರುತ್ತದೆ. ರಾಮಾಪುರ–ರಾಂಪುರ, ನೇಱಲುಗುಣ್ಡಿ–ನೇರಲಗುಂಡಿ.

11. ಅನುಸ್ವಾರಗಳು ಲೋಪಗೊಂಡು ದ್ವಿತ್ವಗೊಳ್ಳುವಿಕೆ ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳಲ್ಲಿ ಕಂಡುಬರುತ್ತದೆ. ಹೊಂನಾಳಿ–ಹೊನ್ನಾಳಿ, ಸುರಹೊಂನೆ–ಸುರಹೊನ್ನೆ

12. ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳಲ್ಲಿ ತದ್ಭಗಳು ಕಂಡುಬರುತ್ತವೆ. ಮುಗತೆನಹಳ್ಳಿ.

13. ಎಲ್ಲಾ ವಾರ್ಗಿಕಗಳು ಬಹುತೇಕಕನ್ನಡದವೇಆಗಿದ್ದು ಸಂಸ್ಕೃತದ ವಾರ್ಗಿಕಗಳು ಅತೀ ವಿರಳವಾಗಿರುವುದರಿಂದ ಹೊನ್ನೂರನಾಡುಅಚ್ಚಗನ್ನಡ ಪ್ರದೇಶಎಂಬುದರಲ್ಲಿ ಸಂದೇಹವೇಇಲ್ಲ. ಸಂಸ್ಕೃತದ ವಾರ್ಗಿಕಗಳಿದ್ದರೆ ಅವು ಪುನರ್ ನಾಮಕರಣಗೊಂಡವು.

14. ಯರಗನಾಡು, ಬೆಳ್ಗುಂದ ಇನ್ನೂ ಮುಂತಾದವುಗಳು ವರ್ಣನಾತ್ಮಕ ಸ್ಥಳನಾಮಗಳಾಗಿವೆ.

15. ದಾಸರಹಟ್ಟಿ, ಗೊರವರಹಳ್ಳಿ, ಗೋವನಹಳ್ಳಿಗಳು ಜನಾಂಗವಾಚಿ ಸ್ಥಳನಾಮಗಳಾಗಿವೆ.

**********

**ಆಧಾರಗ್ರಂಥ :**

1. ಶ್ರೀ ಬಿ.ಎಲ್.ರೈಸ್‌ರವರು ಸಂಪಾದಿಸಿರುವ ಎಪಿಗ್ರಫಿಯಾಕರ್ನಾಟಿಕ ಸಂಪುಟ–7 1901ರ ಆವೃತ್ತಿ

**ಕೊನೆ ಟಿಪ್ಪಣಿಗಳು :**

1. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕಅಧ್ಯಯನ : ಸಪ್ನ ಬುಕ್ ಹೌಸ್ ಬೆಂಗಳೂರು–2014, ಪುಟ : 09
2. ದೇ.ಜ.ಗೌ : ಸ್ಥಳನಾಮ ವ್ಯಾಸಂಗ : ಸಹ್ಯಾದ್ರಿ ಪ್ರಕಾಶನ ಮೈಸೂರು–1990, ಪುಟ :22
3. ಶಂ.ಬಾ.ಜೋಶಿ : ಎಡೆಗಳು ಹೇಳುವ ಕಂನಾಡು ಕಥೆಗಳು : ಮಾಧವ ಬಲ್ಲಾಳ ಬಂಧುಗಳು ಧಾರವಾಡ–1947, ಪುಟ : 6